# ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು ಸೆಕ್ಷನ್ 4(1) ಬಿ ಸೆಕ್ಷನ್ (1)

ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೇಂದ್ರದ ಆರ್.ಟಿ.ಸಿ. ಕಾಯಿದೆ 1950'ರ ಅಡಿಯಲ್ಲಿ ಸಾರ್ವಜನಿಕರಿಗೆ ಉತ್ತಮ, ಸಮರ್ಪಕ ಹಾಗೂ ಸೂಕ್ತ ಪ್ರಯಾಣದರಗಳನ್ನು ವಿಧಿಸಿದ ಸಾರಿಗೆ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರದಿಂದ 1961ರಲ್ಲಿ ಸ್ಥಾಪಿಸಲ್ಪಟ್ಟಿದೆ. ರಾಜ್ಯ ಸರ್ಕಾರವು ಸದರಿ ಕಾಯಿದೆಯ ಅನುಸಾರ ನಿಗಮದ ವ್ಯವಸ್ಥಿತ ಕಾರ್ಯಾಚರಣೆ ಹಾಗೂ ಸಮರ್ಪಕ ಆಡಳಿತ ವ್ಯವಸ್ಥೆಯ ನಿರ್ವಹಣೆಗಾಗಿ 'ಕರಾರಸಾ ನಿಗಮದ ನಿಯಮಗಳು 1961'ನ್ನು ರೂಪಿಸಿದ್ದು, ಇದರಲ್ಲಿನ ನಿಯಮಗಳ ಅನುಸಾರ ಆಡಳಿತ ನಿರ್ವಹಣೆ ನಡೆಸಲಾಗುತ್ತಿದೆ. ಆಡಳಿತವನ್ನು ಉತ್ತಮ ಪಡಿಸುವ ಉದ್ದೇಶದಿಂದ ಕ.ರಾ.ರ.ಸಾ.ನಿಗಮದಿಂದ ಬೇರ್ಪಡೆಗೊಂಡು, ದಿನಾಂಕ:01-10-2000 ರಂದು ಕಲಬುರ್ಗಿಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಾಗಿ ಪ್ರಾದೇಶಿಕವಾರು ಪ್ರಾರಂಭಗೊಂಡಿತು. ಈ.ಕ.ರಾ.ರ.ಸಾ. ಸಂಸ್ಥೆಯು ರಾಜ್ಯದ ಉತ್ತರ ಹಾಗೂ ದಕ್ಷಿಣ ಭಾಗದ ಹಾಗೂ ಅಂತರ್ ರಾಜ್ಯ ಮಾರ್ಗಗಳ ಕಾರ್ಯಾಚರಣೆಗಳನ್ನು ಮಾಡುತ್ತಿದೆ.

ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಡುವ ಹಿರಿಯ ಐ.ಎ.ಎಸ್./ಐ.ಪಿ.ಎಸ್/ಕೆ.ಎ.ಎಸ್ ಅಧಿಕಾರಿಗಳು ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಗೊಳ್ಳುತ್ತಾರೆ. ಹಾಗೂ ಇಲಾಖೆಯ ಮುಖ್ಯಸ್ಥರು ಇವರಡಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಪ್ರಮುಖ ನಿರ್ಧಾರಗಳು ಇಲ್ಲಿಂದ ಹೊರಬಿದ್ದು ಇವುಗಳನ್ನು ಪರಿಣಾಮಕಾರಿಯಾಗಿ ವಿಭಾಗ ಮತ್ತು ಘಟಕ ಮಟ್ಟದಲ್ಲಿ ಕಾರ್ಯರೂಪಕ್ಕೆ ತರಲು ಇತರ ಅಧಿಕಾರಿಗಳು ಜವಾಬ್ದಾರಿ ಹೊಂದಿರುತ್ತಾರೆ. ಕೇಂದ್ರ ಕಛೇರಿಯು ವಿಭಾಗ ಮತ್ತು ಘಟಕದ ಉತ್ತಮ ಕಾರ್ಯ ನಿರ್ವಹಣೆಯ ಬಗ್ಗೆ ಸಮೀಕ್ಷೆಯನ್ನು ನಡೆಸಿ ಅಲ್ಲಿಗೆ ಬೇಕಾದ ಅಗತ್ಯಗಳನ್ನು ಪೂರೈಸುತ್ತದೆ. ಹಾಗೂ ಕೇಂದ್ರ ಕಛೇರಿಯು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಇತರೆ ಸಾರಿಗೆ ಸಂಬಂಧಿತ ಇಲಾಖೆಗಳೊಂದಿಗೆ ವ್ಯವಹರಿಸುತ್ತಿದೆ. ವಿಭಾಗ ಮಟ್ಟದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ನೇತೃತ್ವ ವಹಿಸಿ ಕೇಂದ್ರ ಕಛೇರಿಯ ಮಾರ್ಗದರ್ಶನದೊಂದಿಗೆ ಕೆಲಸವನ್ನು ನಿರ್ವಹಿಸುತ್ತಾರೆ. ವಿಭಾಗೀಯ ಕಛೇರಿಯು ಘಟಕಗಳ ಕಾರ್ಯಾಚರಣೆ ಹಾಗೂ ಆಡಳಿತ ಉಸ್ತುವಾರಿಯನ್ನು ವಹಿಸಿದೆ. ವಿಭಾಗದಲ್ಲಿ ಶಾಖೆಗಳ ಶಾಖಾ ಮುಖ್ಯಸ್ಥರು ವಿಭಾಗೀಯ ನಿಯಂತ್ರಣಾಧಿಕಾರಿಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಪ್ರತಿ ವಿಭಾಗದಲ್ಲಿ ಸರಾಸರಿ 5 ರಿಂದ 6 ಘಟಕಗಳು ಕಾರ್ಯ ನಿರ್ವಹಿಸುತ್ತದೆ. ಘಟಕವು ಕಾರ್ಯಾಚರಣೆಯ ಹಾಗೂ ಆದಾಯವನ್ನು ಗಳಿಸುವ ಒಂದು ಮುಖ್ಯ ಕೇಂದ್ರವಾಗಿದೆ. ಪ್ರತಿ ಘಟಕದಲ್ಲಿ ಘಟಕ ವ್ಯವಸ್ಥಾಪಕರು ಮುಖ್ಯಸ್ಥರಾಗಿದ್ದು ಘಟಕದ ನಿರ್ವಹಣೆಯಲ್ಲಿ ಇವರಿಗೆ ಮೇಲ್ವಿಚಾರಕ ಸಿಬ್ಬಂದಿ ಹಾಗೂ ಇತರೆ ನೌಕರರು ಸಹಾಯಕರಾಗಿರುತ್ತಾರೆ. ಘಟಕದಲ್ಲಿ ಬಸ್‌ಗಳ ಕಾರ್ಯಾಚರಣೆ ಸಿಬ್ಬಂದಿಯ ನಿಯೋಜನೆ ಹಾಗೂ ಆದಾಯ ಗಳಿಸುವುದು ಹಾಗೂ ಸಾರ್ವಜನಿಕರ ಬೇಡಿಕೆ ದೂರು,

ಸಲಹೆಗಳಿಗೆ ಸ್ಪಂದಿಸಲಾಗುತ್ತದೆ. ತಾಂತ್ರಿಕ ಇಲಾಖೆಯು ವಾಹನಗಳ ದುರಸ್ಥಿ ಹಾಗೂ ಇವುಗಳಿಗೆ ಸಂಬಂಧಿತ ದಾಖಲೆಗಳನ್ನು ನಿರ್ವಹಿಸುತ್ತದೆ. ಲೆಕ್ಕಪತ್ರ ಇಲಾಖೆಯು ನಿರ್ವಾಹಕರಿಗೆ ಟಿಕೆಟ್ ಯಂತ್ರಗಳ ವಿತರಣೆಯಿಂದ ಹಿಡಿದು ಗಳಿಸುವ ಆದಾಯದ ಲೆಕ್ಕ, ನಗದನ್ನು ಸ್ವೀಕರಿಸುವುದು ಅದನ್ನು ಬ್ಯಾಂಕಿಗೆ ಸಲ್ಲಿಸುವುದು, ಸಿಬ್ಬಂದಿಗೆ ಸಂಬಳ ನೀಡುವುದು ಇತ್ಯಾದಿಗಳನ್ನು ನಿರ್ವಹಿಸುತ್ತದೆ. ನಿರ್ವಹಣೆಗಾಗಿ ಬೇಕಾಗುವ ಬಿಡಿ ಭಾಗಗಳ ಇಂಧನದ ಹಾಗೂ ಇತರೆ ವಸ್ತುಗಳನ್ನು ಪಡೆದು ಅದನ್ನು ಪೂರೈಸುವ ನಿರ್ವಹಣೆಯನ್ನು ಉಗ್ರಾಣ ಶಾಖೆಯು ನಿರ್ವಹಿಸುತ್ತದೆ. ಇದರೊಂದಿಗೆ ನಿಗಮದಲ್ಲಿ ಟಿಕೆಟ್‌ಗಳ ಮುದ್ರಣ ಇಲಾಖೆ, ಅಧಿಕಾರಿಗಳು ಹಾಗೂ ನೌಕರರಿಗೆ ತರಬೇತಿ ಕೇಂದ್ರಗಳು, ದೊಡ್ಡ ಮಟ್ಟದ ತಾಂತ್ರಿಕ ನಿರ್ವಹಣೆಗಾಗಿ ಪ್ರಾದೇಶಿಕ ಕಾರ್ಯಾಗಾರಗಳು, ನೌಕರರ ಹಾಗೂ ಅಧಿಕಾರಿಗಳ ಮತ್ತು ಕುಟುಂಬ ವರ್ಗದವರ ಆರೋಗ್ಯದ ದೃಷ್ಟಿಯಿಂದ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತದೆ. ನಿಗಮವು ರಾಜ್ಯದ ಜನತೆಗೆ ಸಮರ್ಪಕ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಸಾರಿಗೆ ಸೌಲಭ್ಯವನ್ನು ಒದಗಿಸಲು ಒತ್ತನ್ನು ನೀಡಲಾಗಿದ್ದು ಲಗ್ಗೇಜುಗಳನ್ನು ಸಾಗಿಸಲು ಹೆಚ್ಚು ಸ್ಥಳಾವಕಾಶದ ಬಸ್ಸುಗಳನ್ನು ಸಹ ಒದಗಿಸಲಾಗಿದ್ದು ಬಸ್ ಛಾವಣಿಯ ಪ್ರಯಾಣವನ್ನು ತಡೆಗಟ್ಟಲಾಗಿದೆ. ಪಟ್ಟಣಗಳ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಆದ್ಯತೆಯ ಮೇರೆಗೆ ತಡೆರಹಿತ ಹಾಗೂ ವೇಗದೂತ ಸಾರಿಗೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಒದಗಿಸಲಾಗಿದ್ದು, ಇದರಿಂದ ಜೀಪುಮ್ಯಾಕ್ಸಿಕ್ಯಾಬ್‌ಗಳಲ್ಲಿ ಸಂಚರಿಸುವಂತಹ ಪ್ರಯಾಣಿಕರೂ ಸಹ ಈ.ಕ.ರಾ.ರ.ಸಾ. ಸಂಸ್ಥೆಯ ವಾಹನಗಳಲ್ಲಿ ಸಂಚರಿಸಲು ಅನುಕೂಲವಾಗಿದೆ.

**<u>ನಮ್ಮ ದೃಷ್ಟಿಕೋನ:</u>**

ಪ್ರಯಾಣಿಕರಿಗೆ ಸುರಕ್ಷಿತ, ವಿಶ್ವಾಸನೀಯ, ಸೌಜನ್ಯಪೂರಕ, ಮಿತವ್ಯಯ, ಪರಿಸರ–ಸ್ನೇಹಿ, ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು.

**<u>ನಮ್ಮ ಧ್ಯೇಯೋದ್ದೇಶ:</u>**

- ಪ್ರಯಾಣಿಕರ ನಿರೀಕ್ಷೆಗಳನ್ನು ನೆರವೇರಿಸುವುದು ಮತ್ತು ಪರಿಸರ–ಸ್ನೇಹಿ ಹಾಗೂ ಮೌಲ್ಯಾಧಾರಿತ ಸೇವೆಯನ್ನು ಒದಗಿಸುವುದು.
- ನವೀನ ತಂತ್ರಜ್ಞಾನವನ್ನು ಬಳಸಿ ನಿರಂತರ ಸುಧಾರಣೆಯನ್ನು ತರುವುದು ಹಾಗೂ ನವಶೋಧನೆಗೆ ಪ್ರೋತ್ಸಾಹ ನೀಡುವುದು.
- ಕಾರ್ಮಿಕ ಕಲ್ಯಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಮೇಲೆ ಒತ್ತು ನೀಡಿ ಎಲ್ಲಾ ಮಟ್ಟದಲ್ಲಿ ನಮ್ಮ ಕಾರ್ಮಿಕರಲ್ಲಿ ಗುಣಮಟ್ಟ ಜಾಗೃತಿಯನ್ನು ಬೇರೂರಿಸುವುದು
- ಪರಿಸರ ಸಮಸ್ಯೆಯ ಕುರಿತು ನಮ್ಮ ಕಾರ್ಮಿಕರಲ್ಲಿ ಉತ್ಸಾಹಭರಿತ ಜವಾಬ್ದಾರಿ ಮತ್ತು ಬಿಚ್ಚು ಮನಸ್ಸಿನ ಸಂಪರ್ಕವನ್ನು ಕಲ್ಪಿಸುವುದು.

- ಸುರಕ್ಷಿತ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಟ್ಟಗಳನ್ನು ಸಾಧಿಸುವುದು.

**ಗುಣಮಟ್ಟ ಕಾರ್ಯನೀತಿ:**

ಈಕರಾರಸಾ ಸಂಸ್ಥೆಯ ಪ್ರಾದೇಶಿಕ ಕಾರ್ಯಾಗಾರ, ಯಾದಗಿರಿ ಇಲ್ಲಿ ಸಂಸ್ಥೆಯು ತನ್ನ ಉತ್ಪನ್ನಗಳನ್ನು ಮತ್ತು ಪರಿಷ್ಕರಣಗಳನ್ನು ನಿರಂತರವಾಗಿ ಸುಧಾರಿಸಿ, ಸುಸಂಗತ ಗುಣಮಟ್ಟದ ಉತ್ಪನ್ನಗಳನ್ನು ಲೋಪದೋಷಗಳಿಲ್ಲದಂತೆ ಉತ್ಪಾದಿಸುವ ಮೂಲಕ ಪ್ರಯಾಣಿಕರನ್ನು ಸಂತೃಪ್ತಿಪಡಿಸಿ ಜಾಗತಿಕ ಮುಖಂಡತ್ವವನ್ನು ಹೊಂದಲು ಬದ್ಧರಾಗಿದ್ದೇವೆ. ಐ.ಎಸ್.ಓ.2001 : 2000 ಗುಣಮಟ್ಟ ನಿರ್ವಹಣೆ ಪದ್ಧತಿಯನ್ನು ಅಳವಡಿಸಿಕೊಂಡು ನಿರಂತರ ತರಬೇತಿಯ ಮೂಲಕ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸಲಾಗುತ್ತಿದೆ. ಪರಿಸರ ಕಾರ್ಯನೀತಿ ಈಕರಾರಸಾ ನಿಗಮದ ಉತ್ಪಾದನೆ ಮತ್ತು ವ್ಯವಹಾರ ಚಟುವಟಿಕೆಗಳ ಪ್ರಭಾವದಿಂದ ಪರಿಸರದ ಮೇಲುಂಟಾಗುವ ಮಹತ್ವಪೂರ್ಣ ಅಂಶಗಳನ್ನು ಗುರುತಿಸಿ, ಅನ್ವಯಿಸುವ ಕಾನೂನು ಮತ್ತು ಇತರೆ ಅಗತ್ಯಗಳನ್ನು ಪಾಲಿಸಿ, ಪರಿಸರವನ್ನು ಕಾಪಾಡುವಲ್ಲಿ ಜವಾಬ್ದಾರಿಯುತ ನಿರ್ಣಯಗಳನ್ನು ತೆಗೆದುಕೊಂಡು ಪರಿಸರ ಮಾಲಿನ್ಯವನ್ನು ನಿರ್ಮೂಲನಗೊಳಿಸಿ ಅಥವಾ ತಗ್ಗಿಸಿ ಮತ್ತು ನಿರಂತರ ಸುಧಾರಣೆಗಳೊಂದಿಗೆ ಪರಿಸರದ ಮೇಲುಂಟಾಗುವ ದುಷ್ಪರಿಣಾಮಗಳನ್ನು ಕನಿಷ್ಠಗೊಳಿಸಲು ಬದ್ಧವಾಗಿದೆ. ಪರಿಸರ ಸಂಬಂಧಿ ವಿಷಯಗಳನ್ನು ವಿಮರ್ಶಿಸಿ ನಿಯತಕಾಲಿಕ ಗುರಿ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರ ಮಟ್ಟವನ್ನು ಹೆಚ್ಚಿಸಲು ಬದ್ಧವಾಗಿದೆ. ನಿಗಮದಲ್ಲಿ ಉತ್ತಮ ಪರಿಸರ ನಿರ್ವಹಣೆ ಪದ್ಧತಿಗಾಗಿ ಎಲ್ಲಾ ಆಸಕ್ತ ಪಕ್ಷಗಳೊಂದಿಗೆ ನೇರ ಸಂಪರ್ಕವನ್ನು ಹೊಂದಲು ಪ್ರಯತ್ನಿಸುತ್ತಿದೆ.

**ಸುರಕ್ಷತೆ ಕಾರ್ಯನೀತಿ**

‘ಆರೋಗ್ಯ ಮತ್ತು ಸುರಕ್ಷತೆ ಕಾರ್ಯನೀತಿ’ ವಿವರಣೆ – ಈ ದಸ್ತಾವೇಜು ಸಾಮಾನ್ಯ ಅಗತ್ಯಗಳ ಸ್ಥೂಲವಿವರಣೆಯನ್ನು ಈಕರಾರಸಾ ಸಂಸ್ಥೆಯ ಕೇಂದ್ರ ಕಚೇರಿ, ವಿಭಾಗೀಯ ಕಾರ್ಯಾಗಾರರಲ್ಲಿ ಸುರಕ್ಷಿತ ಮತ್ತು ಆರೋಗ್ಯದಾಯಕ ಕರ್ತವ್ಯ ನಿರ್ವಹಣಾ ಪರಿಸರವನ್ನು ನೀಡುವುದು. ಸುರಕ್ಷತೆಯ ಬಗ್ಗೆ ತಿಳುವಳಿಕೆಯನ್ನು ಎಲ್ಲಾ ಖಾಯಂ ಹಾಗೂ ತಾತ್ಕಾಲಿಕ ಸಿಬ್ಬಂದಿ ವರ್ಗದವರಿಗೆ ಕೈಪಿಡಿ ಮಾದರಿಯಲ್ಲಿ ಲಭ್ಯಗೊಳಸಲಾಗಿದೆ. ಈ ಕಾರ್ಯನೀತಿಯು ಸುರಕ್ಷತೆಯ ಶಾಸನಗಳನ್ನೊಳಗೊಂಡು ಈಕರಾರಸಾನಿಗಮದ ಪೂರಕಗಳನ್ವಯ ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ. ಸುರಕ್ಷತಾ ಕಾರ್ಯನೀತಿ ಕಾರ್ಯಕ್ರಮದಲ್ಲಿ ಎಲ್ಲಾ ಸಿಬಂದಿ ವರ್ಗದವರು ಸುರಕ್ಷಿತ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹಾಗೂ ನಿರ್ಧಿಷ್ಟವಾದ ಫಲಿತಾಂಶ ಸುರಕ್ಷತಾ ಕಾರ್ಯನೀತಿಯನ್ನು ನಿರಂತರವಾಗಿ ಪಾಲಿಸುವುದರಿಂದ ಪಡೆಯಬಹುದಾಗಿದೆ.

## ಈಕರಸಾಸಂಸ್ಥೆಯ ಸಾಂಸ್ಥಿಕ ವಿನ್ಯಾಸ (ಕೇಂದ್ರ ಮಟ್ಟ)

ನಿರ್ದೇಶಕ ಮಂಡಳಿ

↓

ಅಧ್ಯಕ್ಷರು

↓

ವ್ಯವಸ್ಥಾಪಕ ನಿರ್ದೇಶಕರು

↓

| | | | | | | | | | |
|---|---|---|---|---|---|---|---|---|---|
| ಮಂಡಳಿ ಕಾರ್ಯದರ್ಶಿ | ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು | ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ | ಮುಖ್ಯ ಸಂಚಾರ ವ್ಯವಸ್ಥಾಪಕರು | ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ | ಉಗ್ರಾಣ ಮತ್ತು ಖರೀದಿ ನಿಯಂತ್ರಕರು | ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ | ಮುಖ್ಯ ತಾಂತ್ರಿಕ ಶಿಲ್ಪಿ | ಮುಖ್ಯ ಕಾಮಗಾರಿ ಅಭಿಯಂತರರು | ಮುಖ್ಯ ಕಾನೂನು ಅಧಿಕಾರಿ |

↓

| | | | | | |
|---|---|---|---|---|---|
| ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು | ಉಪಮುಖ್ಯ ಲೆಕ್ಕಾಧಿಕಾರಿ | ಉಪಮುಖ್ಯ ಸಂಚಾರ ವ್ಯವಸ್ಥಾಪಕರು | ಉಪಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ | ಉಪಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ | ಉಪಮುಖ್ಯ ಕಾನೂನು ಅಧಿಕಾರಿ |

# ಸಂಸ್ಥೆಯ ಸಾಂಸ್ಥಿಕ ನಕ್ಷೆ

## ಕೇಂದ್ರ ಕಛೇರಿ

## ವಿಭಾಗೀಯ ಕಛೇರಿ

| ಪ್ರಾ.ತ.ಕೇ ಹುಮನಾಬಾದ | ಪ್ರಾ.ತ.ಕೇ. ಹ.ಬೊಮ್ಮನಹಳ್ಳಿ | ಪ್ರಾ.ಕಾ.ಯಾದಗಿರಿ | **ಕಲಬುರ್ಗಿ–1** | **ಕಲಬುರ್ಗಿ–2** | ಯಾದಗಿರಿ | ರಾಯಚೂರು | **ಬೀದರ** | ಕೊಪ್ಪಳ | ಬಳ್ಳಾರಿ | ಹೊಸಪೇಟೆ | ವಿಜಯಪುರ |
|---|---|---|---|---|---|---|---|---|---|---|---|
| | | | **ಕಲಬುರ್ಗಿ–1** | **ಕಲಬುರ್ಗಿ–2** | ಸುರಪುರ | ರಾಯಚೂರು–2 | **ಬೀದರ–1** | ಕೊಪ್ಪಳ | ಬಳಾರಿ–1 | ಹೊಸಪೇಟೆ | ಘಟಕ–1 |
| | | | **ಕಲಬುರ್ಗಿ–4** | **ಕಲಬುರ್ಗಿ–3** | ಶಹಾಪೂರ | ರಾಯಚೂರು–3 | **ಬೀದರ–2** | ಕುಷ್ಟಗಿ | ಬಳಾರಿ–2 | ಸಂಡೂರ | ಘಟಕ–2 |
| | | | **ಶೇಡಂ** | **ಜೇವರ್ಗಿ** | ಯದಗಿರಿ | ಸಿಂಧನೂರ | **ಹುಮನಾಬಾದ** | ಗಂಗಾವತಿ | ಬಳಾರಿ–3 | ಕೂಡ್ಲಗಿ | ಘಟಕ–3 |
| | | | **ಚಿತ್ತಾಪೂರ** | **ಅಫ್ಜಲಪುರ** | ಗುರಮಿಠಕಲ್ | ಮಾನ್ವಿ | **ಬ.ಕಲ್ಯಾಣ** | ಯಲಬುರ್ಗಾ | ಕುರಗೋಡ | ಹರಪನಹಳ್ಳಿ | ಬಾಗೇವಾಡಿ |
| | | | **ಕಾಳಗಿ** | **ಆಳಂದ** | | ಮಸ್ಕಿ | **ಭಾಲ್ಕಿ** | ಕುಕನೂರ | ಶಿರಗುಪ್ಪ | ಹೂ.ಹಡಗಲಿ | ತಾಳಿಕೋಟಿ |
| | | | **ಚಿಂಚೊಳ್ಳಿ** | | | ಲಿಂಗಸೂರ | **ಔರಾದ** | | | ಹ.ಬೊಮ್ಮನಹಳ್ಳಿ | ಸಿಂದಗಿ |
| | | | | | | ದೇವದುರ್ಗ | | | | | ಇಂಡಿ |
| | | | | | | | | | | | ಮುದ್ದೇಬಿಹಾಳ |